2013 (2513) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) :- ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸಣ್ಣ ದೊಡ್ಡ ಕೆರೆಗಳೆಷ್ಟು (ವಿಸ್ತೀರ್ಣ ಸಹಿತ ಮಾಹಿತಿ ನೀಡುವುದು);

ಆ) ಇದುವರೆವಿಗೂ ಹೂಳೆತ್ತದ ಕೆರೆಗಳಲ್ಲಿ ನೀರು ನಿಲ್ಲದೇ ಇರುವುದರಿಂದ ಕೆರೆಯ ಜಮೀನು ಒತ್ತುವರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕೆರೆಗಳು, ಬಾಂದುಗಳೂ ಅಭಿವೃದ್ಧಿಯಿಂದ ವಂಚಿತವಾಗಿರುವುದರಿಂದ ಕೆರೆಗಳು ಕಾಣೆಯಾಗುವ ಬಗ್ಗೆ ಆತಂಕವಿದೆಯೆ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಜಲ ಸಂಪನ್ಮೂಲ ಇಲಾಖೆಗೆ ಸಂಬಂಧಿಸಿದಂತೆ ವಿವರಗಳನ್ನು ಅನುಬಂಧ 1 ರಲ್ಲಿ ನಮೂದಿಸಲಾಗಿದೆ.

ಆ) ಬಹುತೇಕ ಕೆರೆಗಳಿಗೆ ಕಾಲುವೆಗಳಿಂದ ನೀರು ಒದಗಿಸಲಾಗುತ್ತಿದೆ. ನೀರು ನಿಲ್ಲದೇ ಕೆರೆಯ ಜಮೀನು ಒತ್ತುವರಿಯಾಗಿರುವ ಪ್ರಕರಣಗಳು ಇರುವುದಿಲ್ಲ. ಆದರೂ ಇತ್ತೀಚಿನ ಸರ್ವೆ ಪ್ರಕಾರ 14 ಕೆರೆಗಳ ತುದಿ ಭಾಗದಲ್ಲಿನ ಸ್ಥಳಗಳು ಒತ್ತುವರಿಯಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಈ ಪೈಕಿ 5 ಕೆರೆಗಳ ಒತ್ತುವರಿಯನ್ನು ಕಂದಾಯ ಇಲಾಖೆಯ ಮೂಲಕ ತೆರವುಗೊಳಿಸಲಾಗಿದೆ.

ಇ) ಕೆರೆಗಳೂ ಕಾಣೆಯಾಗುವ ಆತಂಕ ಇರುವುದಿಲ್ಲ.

ಅನುಬಂಧ – 1

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಕ್ಷೇತ್ರದ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿನ ಕೆರೆಗಳ ವಿವರಗಳು :

ಕ್ರ.ಸಂ	ತಾಲ್ಲೂಕು	ಗ್ರಾಮ	ಕೆರೆಯ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)
1	ಯಳಂದೂರು	ಅಂಬಳೆ	ಅಂಬಳೆ ಕರೆ	380
2	ಯಳಂದೂರು	ಗುಂಬಳ್ಳಿ	ಗುಂಬಳ್ಳಿ ಕೆರೆ	251
3	ಯಳಂದೂರು	ಉಪ್ಪಿನಮೋಳೆ	ಉಪ್ಪಿನಮೋಳೆ ಕರೆ	55
4	ಯಳಂದೂರು	ಯರಗಂಬಳ್ಳಿ	ಎಲೆ ಕೆರೆ	120
5	ಯಳಂದೂರು	ಯರಗಂಬಳ್ಳಿ	ಯರಗಂಬಳ್ಳಿ ಕೆರೆ	65
6	ಯಳಂದೂರು	ಅವಲೇಕಂದಹಳ್ಳಿ	ಕಂದಹಳ್ಳೀ ಕೆರೆ	45
7	ಯಳಂದೂರು	ವೈ.ಕೆ.ಮೋಳೆ	ವೈ.ಕೆ.ಮೋಳೆ ಕೆರೆ	72
8	ಯಳಂದೂರು	ದುಗ್ಗಹಟ್ಟಿ	ದುಗ್ಗಹಟ್ಟಿ ಕೆರೆ	73
9	ಯಳಂದೂರು	ಅಗರ	ಅಗರ ಕೆರೆ	887
10	ಯಳಂದೂರು	ಮದ್ದೂರು	ಮದ್ದೂರು ಕೆರೆ	742
11	ಯಳಂದೂರು	ಯರಿಯೂರು	ಯರಿಯೂರು ಕೆರೆ	510
12	ಯಳಂದೂರು	ಹೊನ್ನೂರು	ಹೊನ್ನೂರು ಕೆರೆ	282

13	ಯಳಂದೂರು	ಕೆಸ್ತೂರು	ಕೆಸ್ತೂರು ಕೆರೆ	191
14	ಕೊಳ್ಳೇಗಾಲ	ಸಿದ್ದಯ್ಯನಪುರ	ದೊಡ್ಡರಂಗನಾಥ ಕೆರೆ	53
15	ಕೊಳ್ಳೇಗಾಲ	ಕೊಳ್ಳೇಗಾಲ	ಚಿಕ್ಕರಂಗನಾಥ ಕೆರೆ	96
16	ಕೊಳ್ಳೇಗಾಲ	ಹೊಸಣಗಳ್ಳಿ	ಪಾಪನ ಕೆರೆ	43
17	ಕೊಳ್ಳೇಗಾಲ	ಕೊಳ್ಳೇಗಾಲ	ಕೊಂಗಲ ಕೆರೆ	67
18	ಕೊಳ್ಳೇಗಾಲ	ಕುಂತೂರು	ಕುಂತೂರು ಕೆರೆ	350
19	ಕೊಳ್ಳೇಗಾಲ	ಹೊಂಡರಬಾಳು	ಹೊಂಡರಬಾಳು ಕೆರೆ	110
20	ಕೊಳ್ಳೇಗಾಲ	ತೇರಂಬಳ್ಳಿ	ತೇರಂಬಳ್ಳಿ	123
21	ಕೊಳ್ಳೇಗಾಲ	ಮುಳ್ಳೂರು	ಮುಳ್ಳೂರು ಕೆರೆ	158
22	ಕೊಳ್ಳೇಗಾಲ	ಹಂಪಾಪುರ	ಹಂಪಾಪುರ ಕೆರೆ	137
23	ಕೊಳ್ಳೇಗಾಲ	ಸರಗೂರು	ಧನಗೆರೆ ಕೆರೆ	100
24	ಕೊಳ್ಳೇಗಾಲ	ಮುಡಿಗುಂಡಂ	ಮುಡಿಗುಂಡಂ ಕೆರೆ	82